## ವಾರ್ತಾ ವಿಶ್ಲೇಷಣೆ

# ವಿಚ್ಛಿದ್ರತೆಯಿಂದ ಅಖಂಡತೆಯೆಡೆಗೆ

**ಮಾ**ನವನು ಸ್ವಭಾವತಃ ಸಂಘಜೀವಿ. ಒಟ್ಟುಗೂಡಿ ಬಾಳುವುದು 'ಸಮಾಜ' ಎಂಬ ಕಲ್ಪನೆಗೆ ನಾಂದಿಯಾಯಿತು. ಆದರೆ ಮಾನವನು ಸ್ವಭಾವತಃ ಸ್ವಾರ್ಥಿ ಕೂಡ ಹೌದು. ಈ ಸ್ವಾರ್ಥ ಭಾವನೆಯು ಸಮಾಜದ ಹಿತಕ್ಕೆ ಅವನನ್ನು ವಿಮುಖನನ್ನಾಗಿ ಮಾಡುತ್ತದೆ. ಈ ಬಗೆಯ ವ್ಯಕ್ತಿಗಳನ್ನೇ ನಾವು 'ವಿಚ್ಛಿದ್ರಕಾರಿ ಶಕ್ತಿಗಳು' ಎನ್ನುವುದು.

ಸಮಾಜವನ್ನು ಒಡೆಯುವುದಕ್ಕೆ ಅನೇಕ ಸಬೂಬುಗಳು ಸಿಕ್ಕುತ್ತವೆ. ಧರ್ಮ, ಭಾಷೆ, ಆರ್ಥಿಕ ವೈಪರೀತ್ಯ, ಸಾಮಾಜಿಕ ಸವಲತ್ತು, ಅಧಿಕಾರ, ದೇಶ, ಪ್ರಾಂತ್ಯ – ಹೀಗೆ ಮಾನವ ಜನಾಂಗದಲ್ಲಿ ಸಹಜವಾಗಿ ತೋರಿಬರುವ ವೈವಿಧ್ಯಗಳು ಅದನ್ನು ಒಡೆಯಲೂ ಸಾಧನಗಳಾಗಬಹುದು. ಇದರಿಂದ ಹಲವಾರು ವರ್ಷಗಳಿಂದ ಜೋಪಾನವಾಗಿ ಬೆಳೆದುಕೊಂಡ ಬಂದ ವ್ಯವಸ್ಥೆಗಳಿಗೆ ಧಕ್ಕೆ ತಗಲಿ, ಸಾಮಾನ್ಯ ಜನರ ಸುಖಸಂತೋಷಗಳಿಗೆ ಭಂಗ ಬರುವುದು.

ಆದ್ದರಿಂದ ಒಟ್ಟು ಮಾನವತೆಯ ಹಿತಕ್ಕೆ 'ಅಖಂಡತೆಯ ಭಾವನೆ' ಅತ್ಯಂತ ಪ್ರಯೋಜನಕಾರಿ. ವಿವಿಧ ಪ್ರದೇಶಗಳ, ವಿವಿಧ ಹಿನ್ನೆಲೆಗಳಿರುವ ಜನರು ಪರಸ್ಪರ ಅರಿತುಕೊಳ್ಳುವ ವಾತಾವರಣ ಸೃಷ್ಟಿಯಾಗಬೇಕಾದುದು ಅತ್ಯಂತ ಅವಶ್ಯಕ. ಅದಕ್ಕಾಗಿ ಒಟ್ಟಾಗಿ ಬಾಳುವುದಕ್ಕೆ ಪೋಷಕವಾದ ವಿಚಾರಗಳ ಪ್ರಸಾರ ಮತ್ತು ಅವುಗಳಲ್ಲಿ ಶಿಕ್ಷಣ ಆಗಬೇಕು. ಆಗ ಮಾತ್ರ ನಾವು ವಿಚ್ಛಿದ್ರಕಾರಿ ಶಕ್ತಿಗಳ ಉಗಮವನ್ನು ತಡೆಯಲು ಸಾಧ್ಯವಾಗುತ್ತದೆ.

ಇತ್ತೀಚಿಗೆ ಮುಂಬೈ ನಗರದಲ್ಲಿ ನಡೆದ ಭಯೋತ್ಪಾದನೆಯ ಕೃತ್ಯಗಳು ವಿಚ್ಛಿದ್ರಕಾರಿ ಶಕ್ತಿಗಳಿಂದ ಪ್ರಚೋದಿತವಾದುವು. ಇದರಿಂದ ಭಯಭೀತರಾದ ಸಾಮಾನ್ಯ ಜನತೆ, ತಮ್ಮ ಕೋಪತಾಪಗಳನ್ನು ಹಲವು ಬಗೆಗಳಲ್ಲಿ ವ್ಯಕ್ತಪಡಿಸುತ್ತಿರುವುದು ಸಹಜವೇ. ಆದರೆ ಇದೇ ಸಮಾಜ, ವಿಚ್ಛಿದ್ರಕಾರಿ ಶಕ್ತಿಗಳ ಉಗಮಕ್ಕೆ ಬೇಕಾದ ಭೂಮಿಕೆಯನ್ನು ಸಿದ್ಧಮಾಡಿರುವುದು ಕೂಡ ನಾವು ಕಡೆಗಣಿಸಲಾಗದ ಅಂಶ.

ಪೋಲೀಸ್, ಸೈನ್ಯ, ಗೂಢಚಾರ ವಿಭಾಗ – ಇವುಗಳು ವಿಚ್ಛಿದ್ರಕಾರಿ ಶಕ್ತಿಗಳ ಚಟುವಟಿಕೆಯನ್ನು ತಡೆಯಲು ವಹಿಸುವ ಪಾತ್ರ ಸೀಮಿತವಾದುದು. ಸೈದ್ಧಾಂತಿಕವಾಗಿ ಮತ್ತು ರಾಜಕೀಯ ಇಚ್ಛಾಶಕ್ತಿಯ ಮೂಲಕ ಈ ಕಾರ್ಯ ಆಗಬೇಕು. ಅದಕ್ಕಾಗಿ ಜನರ ಮನಃಪರಿವರ್ತನೆಯೇ ಮೂಲಭೂತವಾಗಿ ಆಗಬೇಕಾಗಿರುವ ಸಂಗತಿ.

ಅಖಂಡತೆಯ ಭಾವನೆಗಳಿಗೆ ಪುಷ್ಟಿಕೊಡುವ ಆಧ್ಯಾತ್ಮಿಕ ಶಿಕ್ಷಣದ ಅಭಾವವೇ ಇಂದಿನ ಸಮಸ್ಯೆಗೆ ಮುಖ್ಯ ಕಾರಣ. ಮಕ್ಕಳು ಪಡೆಯುವ ಅಲ್ಪಸ್ವಲ್ಪ ಧಾರ್ಮಿಕ ಶಿಕ್ಷಣವೂ, ಅವರು ಇತರ ಧರ್ಮದವರನ್ನು ಸಂಶಯದಿಂದ ನೋಡುವಂತೆ ಮಾಡುತ್ತದೆಯೇ ಹೊರತು, ಅಖಂಡತೆಯ ಭಾವವನ್ನು ಅವರಲ್ಲಿ ಹುಟ್ಟುಹಾಕುವುದಿಲ್ಲ. ಹೀಗಾಗಿ, ಸಾಮಾನ್ಯ ದೃಷ್ಟಿಯಲ್ಲಿ 'ಧರ್ಮ' ಎನ್ನುವುದು ನಮಗೆ 'ಶಾಪ' ವಾಗಿ ಪರಿಣಮಿಸಿದೆ.

ಧರ್ಮವನ್ನು ವಿಚ್ಛಿದ್ರತೆಯ ಅಂಶವಾಗಿ ಪರಿಗಣಿಸಿರುವುದೇ ಈ ಬಗೆಯ ವಿನಾಶಕಾರಿ ಕೃತ್ಯಗಳಿಗೆ ಕಾರಣವಾಗುತ್ತದೆ. ಧರ್ಮವನ್ನು ಮತಪಂಗಡಗಳ ನಡುವಿನ ಸೇತುವೆಯಂತೆ ಬೋಧಿಸಿದಾಗ ಮಾತ್ರ, ಜನರಲ್ಲಿ ಅಖಂಡತೆಯ ಭಾವನೆ ಉತ್ಪನ್ನವಾಗುತ್ತದೆ. ಅದಕ್ಕಾಗಿ ಧರ್ಮದ ಸಾರದಂತಿರುವ 'ಆಧ್ಯಾತ್ಮಿಕತೆ'ಗೆ ಒತ್ತು ಕೊಡಬೇಕಾದುದು ಅವಶ್ಯಕ. ಅಧ್ಯಾತ್ಮಿಕತೆಯು ಹೊರನೋಟಕ್ಕೆ ಕಾಣುವ ಧಾರ್ಮಿಕ ವೈವಿಧ್ಯಗಳ ಹಿಂದಿರುವ ಹೂರಣ. ಅದು ಮಾನವತೆಯ ಅಖಂಡತೆಗೆ ಭದ್ರ ಬುನಾದಿಯನ್ನು ನೀಡುತ್ತದೆ, ಆ ಮೂಲಕ ವಿಶ್ವಕಲ್ಯಾಣಕ್ಕೆ ಎಡೆಮಾಡಿ ಕೊಡುತ್ತದೆ.

ಅಧ್ಯಾತ್ಮವು ಸತ್ಯದ ಪ್ರತಿಪಾದನೆಯಾಗಿದೆ. ಸತ್ಯತತ್ತ್ವದ ಭೂಮಿಕೆಯ ಮೇಲೆ ಕಟ್ಟುವ ವ್ಯವಸ್ಥೆಯು ಅಖಂಡತೆಯನ್ನು ಕಾಪಾಡಿಕೊಳ್ಳುವಲ್ಲಿ ಸಫಲವಾಗುತ್ತದೆ. ಉಳಿದ ಯಾವುದೇ ಬಗೆಯಲ್ಲಿ ಈ ದಿಕ್ಕಿನಲ್ಲಿ ನಾವು ಮಾಡುವ ಪ್ರಯತ್ನಗಳು, ಸತ್ಯದ ಆಧಾರದ ಮೇಲೆ ನಿಂತಿಲ್ಲದಿರುವುದರಿಂದ ವಿಫಲವಾಗುತ್ತವೆ. ಈ ಅಂಶವನ್ನು ಅತ್ಯಂತ ಬುದ್ಧಿವಂತ ಮುತ್ಸದ್ದಿಗಳು ಕೂಡ ಅರಿತುಕೊಳ್ಳದಿರುವುದು ದೌರ್ಭಾಗ್ಯದ ಸಂಗತಿಯೇ ಸರಿ.

ಈ ಆಧುನಿಕ ಯುಗದಲ್ಲಿ ಧರ್ಮದ ತಿರುಳಾದ ಆಧ್ಯಾತ್ಮಿಕತೆಯನ್ನು, ಅದರ ಪರಿಶುದ್ಧ ರೂಪದಲ್ಲಿ ಪ್ರಕಟಮಾಡಿ ತೋರಿಸಿದವರೆಂದರೆ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು. ಆಧ್ಯಾತ್ಮಿಕ ಹಿನ್ನೆಲೆಯಲ್ಲಿ, ಮಾನವ ಜೀವನದ ಎಲ್ಲ ರಂಗಗಳಲ್ಲಿಯೂ ಸಾಮರಸ್ಯ ಮತ್ತು ಸಮನ್ವಯಗಳನ್ನು ಸಾಧಿಸಿ ಬೋಧಿಸಿದ ಮಹನೀಯರು ಅವರು. ಹೀಗಾಗಿ ಅವರ ಸಂದೇಶಗಳ ಪ್ರಸಾರವು, ವಿಚ್ಛಿದ್ರ ಶಕ್ತಿಗಳ ತಡೆಗೆ ಮೂಲಭೂತವಾದ, ಅಖಂಡತೆಯ ಭಾವನೆಗಳ ಪ್ರಚಾರಕ್ಕೆ ಇಂಬು ಕೊಡುತ್ತದೆ. ಹೆಚ್ಚು ಹೆಚ್ಚು ಜನನಾಯಕರು, ಧಾರ್ಮಿಕ ಮುಖಂಡರು, ಸಾಮಾನ್ಯ ಜನರು ಈ ಜೀವದಾಯಿನಿ ಭಾವನೆಗಳನ್ನು ಅರಿತುಕೊಂಡು, ಅದರ ಬೆಳಕಿನಲ್ಲಿ ತಮ್ಮ ಕಾರ್ಯಕ್ಷೇತ್ರಗಳಲ್ಲಿ ವ್ಯವಹರಿಸಿದಾಗ, ಸಹಜವಾಗಿಯೇ ಶಾಂತಿ ಸಮಾಧಾನಗಳು ನಿರ್ಮಾಣವಾಗುತ್ತವೆ. ಇಲ್ಲದಿದ್ದರೆ, ವಿಚ್ಛಿದ್ರಕಾರಿ ಶಕ್ತಿಗಳು, ಜನರ ಪ್ರಾಣಗಳನ್ನು ತೆಗೆಯುವುದಲ್ಲದೆ, ರಾಷ್ಟ್ರಚೇತನವನ್ನೂ ಭ್ರಷ್ಟಗೊಳಿಸಿಯಾರು, ಎಚ್ಚರಿಕೆ!